**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 07.01.2025**

**ಪಾಟೀ ಸವಾಲು : ಶ್ರೀ ಎ ಎಂ ಎನ್ 3 ನೇ ಪ್ರತಿವಾದಿ ಪರ ವಕೀಲರಿಂದ**

ನಾನು 4 ನೇ ತರಗತಿ ವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. 1 ನೇ ಪ್ರತಿವಾದಿ ಹಾಗೂ ಅವರ ಕುಟುಂಬಸ್ಥರು 40 ವರ್ಷಗಳಿಂದ ಪರಿಚಯವಿದ್ದಾರೆ. ದಾವಾ ಸ್ವತ್ತಿನ ಸರ್ವೇ ನಂ.299 ವಿಸ್ತೀರ್ಣ 3 ಎಕರೆ ಇದೆ. ದಾವಾ ಸ್ವತ್ತು 1 ನೇ ಪ್ರತಿವಾದಿಗೆ ದರ್ಖಾಸ್ತು ಮೂಲಕ ಬಂದಿದೆ. ನಾನು ದರ್ಖಾಸ್ತು ಮೂಲಕ ಬಂದಿದೆ ಎಂದು ವಾದ ಪತ್ರದಲ್ಲಿ ಹಾಗೂ ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ ತಿಳಿಸಿಲ್ಲವೆಂದರೆ ಸರಿಯಲ್ಲ. ದಾವಾ ಸ್ವತ್ತು ಬಹಿರಂಗ ಹರಾಜು ಮೂಲಕ ಬಂದಿದೆ ಎಂದು ವಾದ ಪತ್ರದಲ್ಲಿ ಹಾಗೂ ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ ಸುಳ್ಳಾಗಿ ತಿಳಿಸಲಾಗಿದೆ ಎಂದರೆ ಸರಿಯಲ್ಲ. ನಾನು ದರ್ಖಾಸ್ತು ಮೂಲಕ ಬಂದಿರುವ ಬಗ್ಗೆ ಸಾಗುವಳಿ ಚೀಟಿ ನೋಡಿಲ್ಲ. ಆ ರೀತಿ ಯಾವ ಕಾಲದಲ್ಲಿ 1 ನೇ ಪ್ರತಿವಾದಿಗೆ ದಾವಾ ಸ್ವತ್ತು ಬಂದಿದೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಸಾಗುವಳಿ ಹೊಂದಿದ್ದು, ಆ ನಂತರವೇ ದರ್ಖಾಸ್ತು ಮೂಲಕ ಮಂಜೂರಾತಿ ಪಡೆದಿದ್ದಾರೆ ಎಂದರೆ ಸರಿ. ನನಗೆ ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇಲ್ಲದೆ ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಪಹಣಿ ಮಾತ್ರ ನೋಡಿದ್ದೇನೆ. 1 ನೇ ಪ್ರತಿವಾದಿಯು ಯಾವ ದಿನಾಂಕದಂದು ಕರಾರು ಪತ್ರ ಬರೆದಿದ್ದಾರೆ ಎಂದರೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ 2006 ರಲ್ಲಿ ಬರೆದಿದ್ದಾರೆ ಎಂದು ನುಡಿಯುತ್ತಾರೆ. ಕ್ರಯ ಪತ್ರವನ್ನು ಬಾಗೇಪಲ್ಲಿ ಉಪ

ನೋಂದಾಣಾಧಿಕಾರಿಯವರ ಕಛೇರಿಯಲ್ಲಿ ಸಿದ್ಧಪಡಿಸಲಾಗಿದೆ. ಸದರಿ ಪತ್ರವು ನೋಂದಣಿ ಆಗಿದೆ. ನಿಪಿ 1 ಉಪ ನೋಂದಾಣಾಧಿಕಾರಿಯವರ ಕಛೇರಿಯಲ್ಲಿ ನೋಂದಣಿ ಆಗಿಲ್ಲವೆಂದರೆ ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನನಗೆ ಕರಾರು ಹಾಗೂ ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇಲ್ಲವೆಂದರೆ ಸರಿಯಲ್ಲ.

ಕರಾರು ಪತ್ರವನ್ನು 1 ಮತ್ತು 2 ನೇ ಪ್ರತಿವಾದಿಗಳು ಬರೆಯಿಸಿದ್ದಾರೆ. ಮುಂದುವರೆದು ಸದರಿ ಪತ್ರವನ್ನು ರಾಮಚಂದ್ರಪ್ಪ ರವರು ಬರೆದಿದ್ದಾರೆ ಎಂದು ನುಡಿಯುತ್ತಾರೆ. ನಾನು ಸದರಿ ಪತ್ರಕ್ಕೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಆ ಪತ್ರವನ್ನು ಬರೆಯುವಾಗ ನಾನು ಪಕ್ಕದಲ್ಲಿ ಇದ್ದೆ. ಆ ಪತ್ರಕ್ಕೆ ಏನು ಮಾಹಿತಿ ನೀಡಿದ್ದಾರೆ ತಿಳಿದಿದೆಯಾ ಎಂದರೆ ರಾಮಚಂದ್ರಪ್ಪ ರವರು ಪತ್ರದಲ್ಲಿರುವುದನ್ನು ಓದಿ ತಿಳಿಸಿದ್ದರು ಎಂದು ನುಡಿಯುತ್ತಾರೆ.

1 ಮತ್ತು 2 ನೇ ಪ್ರತಿವಾದಿಗಳು ಸ್ಟಾಂಪ್ ಪೇಪರ್ ಅನ್ನು ಖರೀದಿಸಿ ತಂದಿದ್ದರು. 1 ಮತ್ತು 2 ನೇ ಪ್ರತಿವಾದಿಗಳು ಸ್ಟಾಂಪ್ ಪೇಪರ್ ಅನ್ನು ಖರೀದಿಸಿರುವುದಿಲ್ಲ ಮತ್ತು ಅವರು ನಿಪಿ 1 ಪತ್ರಕ್ಕೆ ಯಾವುದೇ ಮಾಹಿತಿ ನೀಡಿಲ್ಲವೆಂದರೆ ಸರಿಯಲ್ಲ. ಪತ್ರ ಬರೆದ ದಿನವೇ ಹಣದ ವ್ಯವಹಾರ ನಡೆದಿದೆ. ನಿಪಿ 1 ಪತ್ರದಲ್ಲಿರುವಂತೆ ಹಣವನ್ನು ಯಾವ ಮೂಲಕ ನೀಡಲಾಗಿದೆ ಎಂದು ವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣಾ ಪತ್ರದಲ್ಲಿ ತಿಳಿಸಿಲ್ಲವೆಂದರೆ ಸರಿಯಲ್ಲ. ನನ್ನ ಹಾಗೂ 1 ಮತ್ತು 2 ನೇ ಪ್ರತಿವಾದಿಗಳ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲವೆಂದರೆ ಸರಿಯಲ್ಲ. ಮುಂದುವರೆದು ಅವರ ಮುಂದೆ ವ್ಯವಹಾರ ನಡೆದಿದ್ದು,

ನಾನು ಹಣ ನೀಡಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮಾರಾಟದ ಸಂಬಂಧ ಮಾತುಕತೆ ಆಗಿಲ್ಲವೆಂದರೆ ಸರಿಯಲ್ಲ.

3 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಮಗಳು. 1 ನೇ ಪ್ರತಿವಾದಿಯು 3 ನೇ ಪ್ರತಿವಾದಿಗೆ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ ಎಂದು 3 ನೇ ಪ್ರತಿವಾದಿಯನ್ನು ದಾವೆಯಲ್ಲಿ ಸೇರಿಸಲಾಗಿದೆ ಎಂದರೆ ಸರಿ. ಆ ರೀತಿ 1 ನೇ ಪ್ರತಿವಾದಿಯು 3 ನೇ ಪ್ರತಿವಾದಿಗೆ ಬರೆದಿರುವ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಆ ರೀತಿ ಯಾವುದೇ ಕ್ರಯ ಪತ್ರವನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವುದು ದಾನ ಪತ್ರವಾಗಿದೆ, ಕ್ರಯ ಪತ್ರವಾಗಿಲ್ಲವೆಂದರೆ ಸರಿಯಲ್ಲ. ಸಾಕ್ಷಿಯ ಸ್ವತಃ ದಾನ ಪತ್ರವನ್ನು ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಆ ಪತ್ರದ ದಿನಾಂಕ ನೆನಪಿಲ್ಲ.

3 ನೇ ಪ್ರತಿವಾದಿ ನನ್ನ ಮೇಲೆ ಅಸಲು ದಾವೆ ಸಂಖ್ಯೆ 132/2015 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ದಾನ ಪತ್ರದ ಆಧಾರದ ಮೇಲೆ 3 ನೇ ಪ್ರತಿವಾದಿಯ ದಾವೆ ಡಿಕ್ರಿಯಾಗಿತ್ತು ಎಂದರೆ ಸರಿಯಲ್ಲ. ಈ ಜಮೀನಿನ ಸಂಬಂಧ ಆರ್ ಎಸ್ ಎ ನಂ. 1445/2019 ರಂತೆ ಘನ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ವಿಚಾರಣಾ ಹಂತದಲ್ಲಿ ಇದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು 3 ನೇ ಪ್ರತಿವಾದಿ ಪರ ದಾನ ಪತ್ರ ಬರೆಯಲು ಸಂಪೂರ್ಣ ಹಕ್ಕಿರುತ್ತದೆ ಹಾಗಾಗಿ 2014 ರಲ್ಲಿ ದಾವಾ ಸ್ವತ್ತನ್ನು 1 ನೇ ಪ್ರತಿವಾದಿಯು 3 ನೇ ಪ್ರತಿವಾದಿಗೆ ದಾನದ ಮೂಲಕ ನೀಡಿದ್ದಾರೆ ಎಂದರೆ 2006 ರಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಸದರಿ ಸ್ವತ್ತನ್ನು ನನಗೆ

ಕರಾರು ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಹಾಗೂ 1 ಮತ್ತು 2 ನೇ ಪ್ರತಿವಾದಿಗಳು ನಡುವೆ ಯಾವುದೇ ಕ್ರಯದ ವ್ಯವಹಾರ ನಡೆದಿಲ್ಲವೆಂದರೆ ಸರಿಯಲ್ಲ. ದಾನ ಪತ್ರ ದಿನಾಂಕದಿಂದ 3 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಸ್ವತ್ತಿನ ಕಂದಾಯ ದಾಖಲೆಗಳು ಇವೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನ ಬಗ್ಗೆ ನನಗೆ ಮಾಹಿತಿ ಇಲ್ಲದೇ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಹಿ/-

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.

OS

Case called out. The plaintiff has entered into the witness box. He admits the facts of the affidavit and identified his signature in the affidavit. He treated as PW 1 and he files affidavit in lieu of examination in chief. Ex.P1 to P got marked. Counsel for defendant prays time for cross examination of PW 1 by

CJ & JMFC, BAGEPALLI.

Case called out. The plaintiff has entered into the witness box. He admits the facts of the affidavit and identified his signature in the affidavit. He treated as PW 1 and he files affidavit in lieu of examination in chief. Ex.P1 to P6 got marked.Since defendant placed exparte. Hence, cross of PW1 taken as nil. Counsel for plaintiff submits no further evidence. Hence the matter is posted for argument by 21.01.2025.

CJ & JMFC, BAGEPALLI.